ರೀತಿಯಲ್ಲಿ ಆ ಕ್ಲಬ್‌ಗಳ ಮೇಲೆ ಕ್ರಮ ತೆಗೆದುಕೊಂಡು ನಿಲ್ಲಿಸಬೇಕೋ ಆ ಕೆಲಸವನ್ನು ಮಾಡುತ್ತೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ನಾನು ಆಗಲೇ ಹೇಳಿದಂತೆ ನಿರ್ದಿಷ್ಟವಾಗಿ ಇಂಥ ಕ್ಲಬ್ ಎಂದು ಹೆಸರು ಹೇಳಿ ವಿವರವನ್ನು ಕೊಡದಿದ್ದರೆ ನಾನು ಏನೂ ಮಾಡುವುದಕ್ಕಾಗುವುದಿಲ್ಲ.

ವಿಷಯ: (ಈ) ಚುಂಚನಕಟ್ಟೆಯಲ್ಲಿರುವ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ಕೊಡಬೇಕಾಗಿರುವ ಕಬ್ಬು ಪೂರೈಕೆ ಬಾಕಿಯ ಹಣದ ಬಗ್ಗೆ

ಶ್ರೀ ಹೆಚ್.ಸಿ. ಬಸವರಾಜ್(ಪಿರಿಯಾಪಟ್ಟಣ): ಮಾನ್ಯ ಅಧ್ಯಕ್ಷರೆ, ಚುಂಚನಕಟ್ಟೆಯಲ್ಲಿರುವ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆಗೆ ಅಲ್ಲಿಯ ಸುತ್ತಮುತ್ತಲ ರೈತರು ಕಬ್ಬನ್ನು ಪೂರೈಕೆ ಮಾಡಿ ದೀರ್ಘಾವಧಿಯೇ ಆಗಿದ್ದರೂ ಇನ್ನು ಆ ರೈತರುಗಳಿಗೆ ಬಾಕಿ ಹಣವನ್ನು ಕೊಟ್ಟಿಲ್ಲ. ಆ ಕಾರ್ಖಾನೆಗೆ 6 ಕೋಟಿ ರೂಪಾಯಿಗಳ ಬ್ಯಾಂಕ್ ಗ್ಯಾರಂಟಿ ಕೊಟ್ಟಿದ್ದರೂ ಕೇವಲ ಎರಡು ಕೋಟಿ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಲಾಗಿದೆ. ರೈತರಿಗೆ ತಮಗೆ ಬರಬೇಕಾದ ಹಣ ಸಕ್ಕರೆ ಕಾರ್ಖಾನೆಯಿಂದ ಸಕಾಲಕ್ಕೆ ಬರದೇ ಸಾಲ ತೀರಿಸಲು ಕೂಡ ಆಗದ ಪರಿಸ್ಥಿತಿ ಬಂದಿರುವುದರಿಂದ ಹಲವಾರು ರೈತರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

ಅಧ್ಯಕ್ಷರು: ಇದಕ್ಕೆ ಸಂಬಂಧಪಟ್ಟಂತೆ ಉತ್ತರ ಕೊಡಲು ಸಂಬಂಧಪಟ್ಟ ಮಂತ್ರಿಗಳು ಈಗ ಮೇಲ್ಮನೆಯಲ್ಲಿದ್ದಾರೆ, ಸಾಧ್ಯವಾದರೆ ಅವರನ್ನು ಕರೆಸಿ ಉತ್ತರ ಕೊಡಿಸುತ್ತೇನೆ. ಈಗ ಆತ್ಮಾನಂದರವರು ಮಾತನಾಡಿ.

ವಿಷಯ: (ಉ) ಮೈಸೂರು ಸಕ್ಕರೆ ಕಾರ್ಖಾನೆಯಿಂದ ರೈತರಿಗೆ ಪಾವತಿ ಮಾಡಬೇಕಾಗಿರುವ ಕಬ್ಬು ಪೂರೈಕೆ ಹಣವನ್ನು ಕೊಡಿಸುವ ಬಗ್ಗೆ.

ಶ್ರೀ ಎಂ.ಎಸ್. ಆತ್ಮಾನಂದ(ಮಂಡ್ಯ): ಮಾನ್ಯ ಅಧ್ಯಕ್ಷರೆ, ಮೈಸೂರು ಸಕ್ಕರೆ ಕಾರ್ಖಾನೆಯಲ್ಲಿ ರೈತರಿಗೆ ಪಾವತಿ ಮಾಡಬೇಕಾದ ಕಬ್ಬಿನ ಹಣವನ್ನು ನೀಡದಿರುವುದರಿಂದ ರೈತರು ಕೃಷಿ ಸಾಲವನ್ನು ಮರು ಪಾವತಿ ಮಾಡಲು ಸಾಧ್ಯವಾಗದಿರುವ ಬಗ್ಗೆ ಪಶುಸಂಗೋಪನಾ ಮತ್ತು ಸಕ್ಕರೆ ಸಚಿವರ ಗಮನ ಸೆಳೆಯುತ್ತೇನೆ.

+ ಶ್ರೀ ವಿ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು): ಮಾನ್ಯ ಅಧ್ಯಕ್ಷರೇ, ಮೈಸೂರು ಸಕ್ಕರೆ ಕಂಪನಿಯು 30-3-2001ರ ವರೆಗೆ 8,87,848 ಟನ್ ಕಬ್ಬನ್ನು ಅರೆದಿರುತ್ತದೆ. 6,48,231 ಕ್ವಿಂಟಾಲ್ ಸಕ್ಕರೆ ದಾಸ್ತಾನಿನಲ್ಲಿರುತ್ತದೆ. ಇಲ್ಲಿಯವರೆಗೆ ಲೆವಿ ಮತ್ತು ಮುಕ್ತ ಮಾರುಕಟ್ಟೆಯಲ್ಲಿ ಈ ಕೆಳಕಂಡಂತೆ ಸಕ್ಕರೆ ಮಾರಾಟವಾಗಿರುತ್ತದೆ.

ಏಪ್ರಿಲ್‌ನಿಂದ ಮಾರ್ಚ್ 30ರ ವರೆಗೆ (ಕ್ವಿಂಟಾಲ್‌ಗಳಲ್ಲಿ)

ಮುಕ್ತ	4,50,645	-	ರೂ.59.25 ಕೋಟಿಗಳು
ಲೆವಿ	2,77,388	-	ರೂ.30.58 ಕೋಟಿಗಳು

ದುಡಿಮೆಯ ಬಂಡವಾಳವನ್ನು ರೂ.47.50 ರಿಂದ 55 ಕೋಟಿಗೆ ಹೆಚ್ಚಿಸಿಕೊಂಡು ರೂ.7.50 ಕೋಟಿ ಹೆಚ್ಚಿನ ಸಾಲವನ್ನು ಪಡೆಯಲಾಗಿದೆ. 1,20,000 ಸಕ್ಕರೆ ಚೀಲಗಳನ್ನು ರಫ್ತು ಮಾಡಲಾಗಿದ್ದು, ಈ ಮೂಲದಿಂದ ಎಲ್ಲ ವೆಚ್ಚ ಕಳೆದು ರೂ.13 ಕೋಟಿಗಳನ್ನು ಸಂಗ್ರಹಿಸಲಾಗಿದೆ. ಈ ರೀತಿ ಬಂದ ಆದಾಯದಲ್ಲಿ ಹೆಚ್ಚಿನ ಮೊತ್ತ ಅಂದರೆ ರೂ.78-00 ಕೋಟಿಯಷ್ಟನ್ನು ಕಬ್ಬಿನ ಸರಬರಾಜಿಗೆ ರೈತರಿಗೆ ಈ ಕೆಳಗೆ ವಿವರಿಸಿದಂತೆ ಪಾವತಿಸಲಾಗಿರುತ್ತದೆ.

1999-2000ದ ವರ್ಷದ ಕಬ್ಬಿನ ಬಾಕಿಯನ್ನು 2000-2001ರ ಜೂನ್ ತಿಂಗಳವರೆಗೆ ರೂ.22 ಕೋಟಿಗಳನ್ನು ಪಾವತಿ ಮಾಡಲಾಗಿದೆ. ಚಾಲ್ತಿ ವರ್ಷದ ಕಬ್ಬಿನ ಬೆಲೆಯ ಪಾವತಿಯನ್ನು ರೈತರ ಸಭೆಯಲ್ಲಿ ಚರ್ಚಿಸಿ ತೀರ್ಮಾನಿಸಿದಂತೆ ಅಂತಿಮ ಸರಬರಾಜು ಮುಗಿದ ಪಾವತಿಗೆ ಸರಬರಾಜಿನ ಟಿಕೇಟುಗಳನ್ನು ಹಾಜರುಪಡಿಸಿದ 30-35 ದಿವಸಗಳೊಳಗೆ ಪಾವತಿಸಿದ ಕಾರ್ಯಕ್ರಮ ಹಾಕಿಕೊಂಡು ಪ್ರಾರಂಭಿಸಲಾಯಿತು. ತದನಂತರ ಇದನ್ನು 45 ದಿನಗಳಲ್ಲಿ ಕೆಲವು ಕಾಲ ನೀಡಿದ್ದು ಮತ್ತೆ ಕಂಪನಿಯ ಆರ್ಥಿಕ ಪರಿಸ್ಥಿತಿ ಪ್ರತಿಕೂಲವಾದ್ದರಿಂದ ಮತ್ತೆ ಮುಂದಕ್ಕೆ ಹಾಕಿ ಹಾಲಿ 80-85 ದಿನಗಳಲ್ಲಿ ಕಬ್ಬಿನ ಬೆಲೆಯನ್ನು ಪೂರ್ಣ ಪಾವತಿ ಮಾಡಲಾಗುತ್ತಿದೆ. ಮಧ್ಯೆ ಸರಬರಾಜು ಮಾಡುವ ಕಬ್ಬಿನ ತೂಕಕ್ಕೆ ಪೂರ್ಣ ಸರಬರಾಜು ಮುಗಿಯುವವರೆಗೆ ಮೂರು ಬಾರಿ ಕಬ್ಬಿನ ಕಟಾವು ಮುಂಗಡ ರೂ.200-00 ಮತ್ತು ಕಟಾವಿನ ಕೂಲಿ ಪ್ರತಿ ಟನ್ನಿಗೆ ರೂ.120-00 ಮತ್ತು ಸರಬರಾಜು ವೆಚ್ಚವನ್ನು ನೀಡುತ್ತಿದ್ದು, ಅಂತಿಮ ಪಾವತಿಯಲ್ಲಿ ರೈತರು ಬ್ಯಾಂಕಿನಿಂದ ಪಡೆದ ಸಾಲದ ವಸೂಲಾತಿಯು ಸೇರಿದ್ದು, ಈ ಮೊತ್ತವನ್ನು ನೇರವಾಗಿ ಬ್ಯಾಂಕುಗಳಿಗೆ ಕಂಪನಿಯಿಂದ ಕಳುಹಿಸಲಾಗುತ್ತಿದೆ. ಈ ಕ್ರಮದಂತೆ ಚಾಲ್ತಿ ವರ್ಷದ ಸರಬರಾಜಿಗೆ ಈಗಾಗಲೇ ರೂ.51.21 ಕೋಟಿಗಳನ್ನು ಪಾವತಿಸಿದೆ. ಬಾಕಿ ರೂ.30.00 ಕೋಟಿಗಳನ್ನು ನಿಗದಿತ ದಿನಾಂಕಗಳಂದು ಪಾವತಿಸಬೇಕಾಗುತ್ತದೆ. 1999-2000ದ ಸಾಲಿನ ಕಬ್ಬಿನ ಬೆಲೆಯ ಹೆಚ್ಚಳ ರೂ.55-00 ಪ್ರತಿ ಟನ್ನಿಗೆ ಇದರ ಬಾಬ್ತು ರೂ.5,29,00,000ಗಳನ್ನು ಪಾವತಿಸಲಾಗಿದೆ ಮತ್ತು ಈ ವರ್ಷದ ಕಬ್ಬಿನ ಬೆಲೆಯ ಹೆಚ್ಚಳವು ಸೇರಿದಂತೆ ರೂ.880-00 ಪ್ರತಿ ಟನ್ನಿಗೆ ಪೂರ್ತಿಯಾಗಿ ನೀಡಲಾಗುತ್ತಿದೆ. ಇದರಿಂದ ಹಿಂದಿನ ವರ್ಷಗಳಿಗಿಂತ ಹೆಚ್ಚಿನ ಹೊರೆಯಾಗಿರುತ್ತದೆ. ಇದಲ್ಲದೆ ಕೇಂದ್ರ ಸರ್ಕಾರದ ಸಕ್ಕರೆ ನೀತಿಯಿಂದ ಹಾಗೂ ಹಿಂದಿನ ವರ್ಷಗಳಲ್ಲಿ ಸಕ್ಕರೆ ಆಮದು ಮಾಡಿಕೊಂಡಿದ್ದರಿಂದ ಸ್ಥಳೀಯ ಸಕ್ಕರೆ ಮಾರಾಟದ ಬೆಲೆಯು ಕುಸಿದಿದ್ದು, ಈ ವರ್ಷವೂ ಬೆಲೆಗಳು ಚೇತರಿಸದೆ ಸಕ್ಕರೆ ಕಂಪನಿಗಳು ಅತೀವ ನಷ್ಟ ಅನುಭವಿಸುವ ಸ್ಥಿತಿಗೆ ಬಂದಿದೆ. ಈ ವರ್ಷದಲ್ಲಿ ಸಕ್ಕರೆ ಬೆಲೆಯು ಕ್ವಿಂಟಾಲ್‌ಗೆ 200 ರೂ.ಗಳು ಕಡಿಮೆಯಾಗಿರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಮೈಸೂರು ಸಕ್ಕರೆ ಕಂಪನಿಯು ಕಳೆದ ಸಾಲಿನಿಂದ ಉತ್ಪಾದನೆಯನ್ನು ಹೆಚ್ಚಿಸಿರುವುದು ಇನ್ನೂ ಹೆಚ್ಚಿನ ಹೊರೆಯಾಗಿರುತ್ತದೆ. ಆದಾಗ್ಯೂ ಕಂಪನಿಯ ಇತರ ವಿಭಾಗದ ಆದಾಯದಿಂದ ರೈತರಿಗೆ ಬಾಕಿಯನ್ನು ಆದಷ್ಟು ಶೀಘ್ರವಾಗಿ ಪಾವತಿಸಲಾಗುತ್ತಿದೆ.

ಅಧ್ಯಕ್ಷರು: ಆಯಿತು ಬಿಡಿ ನಿಮಗೆ ಏನು ಬೇಕು ಅದನ್ನು ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಂ.ಎಸ್. ಆತ್ಮಾನಂದ(ಮಂಡ್ಯ): ಮಾನ್ಯ ಅಧ್ಯಕ್ಷರೆ, ಉತ್ತರದಲ್ಲಿ 30-35 ದಿವಸದ ಒಳಗಾಗಿ ಪಾವತಿಸುವ ಕಾರ್ಯಕ್ರಮ ಹಾಕಿಕೊಂಡು ಪ್ರಾರಂಭಿಸಲಾಗುತ್ತದೆ ಎಂದು ಹೇಳಿದ್ದಾರೆ. ನಮ್ಮ ರೈತರಿಗೆ ಆದಷ್ಟು ಬೇಗ ಆರ್ಥಿಕ ನೆರವನ್ನು ನೀಡಿ ಹಣವನ್ನು ಪಾವತಿ ಮಾಡುವಂತಹ ಕ್ರಮವನ್ನು ತೆಗೆದುಕೊಳ್ಳಬೇಕು. ಏಕೆಂದರೆ ರೈತರು ಸಾಲದ ಹಣವನ್ನು ನೀಡಬೇಕಾಗಿರುತ್ತದೆ.

ಶ್ರೀ ಎ. ಕೃಷ್ಣಪ್ಪ: ಮಾನ್ಯ ಅಧ್ಯಕ್ಷರೆ, ನಮ್ಮ ಮಿತ್ರರಿಗೆ ಎಲ್ಲಾ ವಿಚಾರಗಳು ಗೊತ್ತು. ನಾವು ಬೇರೆ ಕಾರ್ಖಾನೆಗಳಿಗೆ ಹೋಲಿಕೆ ಮಾಡಿ ನೋಡಿದಾಗ ಈ ಮೈಸೂರು ಸಕ್ಕರೆ ಕಾರ್ಖಾನೆಯವರು ಅದೃಷ್ಟಶಾಲಿಗಳು. 13 ರಿಂದ 14 ಕೋಟಿ ರೂಪಾಯಿಯಷ್ಟು ಕಬ್ಬು ಎಕ್ಸ್‌ಪೋರ್ಟ್ ಮಾಡುವುದಕ್ಕೆ ಅವಕಾಶ ಸಿಕ್ಕಿತ್ತು. ಇಲ್ಲದೆ ಇದ್ದರೆ ಕಷ್ಟವಾಗುತ್ತಿತ್ತು. ಈ ವರ್ಷದ ಜೂನ್ ಅಂತ್ಯದೊಳಗೆ ರೈತರಿಗೆ ಬಾಕಿ ಎಷ್ಟಿದೆಯೋ ಅಷ್ಟು ಪಾವತಿ ಮಾಡುತ್ತೇವೆಂದು ಹೇಳುತ್ತೇನೆ.

ವಿಷಯ: (ಊ) ಕರ್ನಾಟಕ ರಾಜ್ಯದ ಮಹಾನಗರ ಪಾಲಿಕೆ ನೌಕರರನ್ನು ಪರಸ್ಪರ ವರ್ಗಾವಣೆ ಕುರಿತು ಕೋರಿರುವ ವಿಚಾರ.

ಶ್ರೀ ಕೆ. ವಿಜಯಕುಮಾರ್ ಶೆಟ್ಟಿ(ಸುರತ್ಕಲ್): ಮಾನ್ಯ ಅಧ್ಯಕ್ಷರೆ, ಕರ್ನಾಟಕ ರಾಜ್ಯದ ಮಹಾನಗರ ಪಾಲಿಕೆ ನೌಕರರನ್ನು ಪರಸ್ಪರ ವರ್ಗಾವಣೆ ಕುರಿತು ಕೋರಿರುವ ಬಗ್ಗೆ ಮಾನ್ಯ ನಗರಾಭಿವೃದ್ಧಿ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ(ನಗರಾಭಿವೃದ್ಧಿ ಸಚಿವರು): ಮಾನ್ಯ ಅಧ್ಯಕ್ಷರೇ, ತಮ್ಮ ಅಪ್ಪಣೆಯನ್ನು ಕೋರಿ ಈ ಕೆಳಗಿನ ಹೇಳಿಕೆಯನ್ನು ನೀಡಬಯಸುತ್ತೇನೆ.

ಕರ್ನಾಟಕ ಮಹಾನಗರ ಪಾಲಿಕೆಗಳ ಅಧಿನಿಯಮ 1976ರ ಕಲಂ 91-ಎ ಪ್ರಕಾರ ಮಹಾನಗರ ಪಾಲಿಕೆಯ ಅಧಿಕಾರಿಗಳು ಅಥವಾ ನೌಕರರನ್ನು ಇತರೆ ನಗರ ಪಾಲಿಕೆ ಅಥವಾ ಸ್ಥಳೀಯ ಸಂಸ್ಥೆಗಳಿಗೆ ಸರಿಸಮನಾದ ಹುದ್ದೆಗೆ ವರ್ಗಾಯಿಸಲು ಸರ್ಕಾರಕ್ಕಿರುವ ಅಧಿಕಾರವನ್ನು ಪ್ರಶ್ನಿಸಿ ಉಚ್ಚ-ನ್ಯಾಯಾಲಯದಲ್ಲಿ ರಿಟ್ ಅರ್ಜಿ ದಾಖಲಾಗಿದ್ದು, ಈ ಬಗ್ಗೆ ಉಚ್ಚ-ನ್ಯಾಯಾಲಯವು ಎಲ್ಲಾ ಮಹಾನಗರ ಪಾಲಿಕೆಗಳಿಗೆ ಸಂಬಂಧಿಸಿದಂತೆ, ಸಾಮಾನ್ಯವಾದ ಒಂದು ವೃಂದ ಕೇಂದ್ರಿಯ ಸೇವೆಯನ್ನು ಜಾರಿಗೆ ತರುವವರೆಗೆ ಕರ್ನಾಟಕ ಮಹಾನಗರ ಪಾಲಿಕೆ ಅಧಿನಿಯಮ 1976ರ ಕಲಂ 91-ಎ ಜಾರಿ ಮಾಡಬಾರದೆಂದು ಆದೇಶಿಸಿದೆ. ಆದ್ದರಿಂದ, ನಗರ ಪಾಲಿಕೆಗಳ ಎಲ್ಲಾ ವಿವಿಧ ಹುದ್ದೆಗಳಿಗೆ ಸಂಬಂಧಿಸಿದಂತೆ ಒಂದು ಏಕರೂಪದ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸುವ ಅವಶ್ಯಕತೆ ಇದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 148 ಬಿಎಂಎಸ್ 99 ದಿನಾಂಕ: 29-12-99ರ ಆದೇಶದಲ್ಲಿ ಮಹಾನಗರ ಪಾಲಿಕೆಗಳ ಹಾಗೂ ಇತರೆ ಸ್ಥಳೀಯ ಸಂಸ್ಥೆಗಳ ನೌಕರರುಗಳನ್ನು ವರ್ಗಾವಣೆ ಮಾಡಲು ಪ್ರಸ್ತುತ ಇರುವ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲು ಸಲಹೆ ಸೂಚನೆಗಳನ್ನೊಳಗೊಂಡ ವರದಿ ನೀಡಲು ಪೌರಾಡಳಿತ ನಿರ್ದೇಶಕರ ಅಧ್ಯಕ್ಷತೆಯಲ್ಲಿ ಉಪ ಸಮಿತಿಯನ್ನು ರಚಿಸಿ ಆದೇಶಿಸಲಾಗಿದೆ.